ಅ) ನೆಲಮಂಗಲ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ಸ್ ಸುಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೀಗಾಗಿರುವುದರಿಂದ ನೆಲಮಂಗಲ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ ಎಷ್ಟು ಗ್ರಾಮಗಳಲ್ಲಿ ವಿದ್ಯುತ್ ಸರಬರಾಜು ನಿಂತು ಹೋಗಿದೆ?

ಇ) ಈ ರೀತಿ ವಿದ್ಯುತ್ ಸರಬರಾಜು ನಿಂತು ಹೋಗಿ ರೈತರ ಪಂಪುಸೆಟ್ಟುಗಳಿಗೆ ತೊಂದರೆಯಾಗಿರುವುದಕ್ಕೆ ಸರ್ಕಾರ ಏನು ಬದಲಿ ಕ್ರಮ ತೆಗೆದುಕೊಂಡಿದೆ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೌದು. ಮಂಡಳಿಯ ಗಮನಕ್ಕೆ ಬಂದಿದೆ.

ಆ) ನೆಲಮಂಗಲ ತಾಲ್ಲೂಕಿನಲ್ಲಿ 11 ಗ್ರಾಮಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿತ್ತು. ಈಗ ಸರಿಪಡಿಸಲಾಗುತ್ತಿದೆ. ಕೊರಟಗೆರೆ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ಸರಬರಾಜನ್ನು ಈಗ ವ್ಯವಸ್ಥೆ ಮಾಡಲಾಗಿದೆ.

ಇ) 1. ಒಳ್ಳೆಯ ಟ್ರಾನ್ಸ್‌ಫಾರ್ಮರ್‌ಗಳನ್ನು ಆದಷ್ಟು ಶೀಘ್ರಗತಿಯಲ್ಲಿ ಸರಬರಾಜು ಮಾಡಿ ಸುಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲಾಗುತ್ತಿದೆ.

2. ಅಕ್ಕಪಕ್ಕದ ಟ್ರಾನ್ಸ್‌ಫಾರ್ಮರ್‌ಗಳಿಂದ ಸಾಧ್ಯವಾದಷ್ಟು ಮಟ್ಟಿಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲಾಗುತ್ತಿದೆ.

ವಿಷಯ : ರಾಜ್ಯದ ವಿದ್ಯುತ್ ಟ್ರಾನ್ಸ್‌ಮಿಷನ್ ಲಾಸ್ ತಡೆಯಲು ಕ್ರಮ.

Q : 1783

ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿದ್ಯುತ್ ಸರಬರಾಜಿನಲ್ಲಿ ಆಗುತ್ತಿರುವ ಟ್ರಾನ್ಸ್‌ಮಿಷನ್ ಲಾಸ್ ಎಷ್ಟು?

ಆ) ಬೇರೆ ರಾಜ್ಯಗಳಲ್ಲಿರುವ ಟ್ರಾನ್ಸ್‌ಮಿಷನ್ ಲಾಸ್ ಎಷ್ಟು?

ಇ) ಈ ಟ್ರಾನ್ಸ್‌ಮಿಷನ್ ಲಾಸನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) 1991-92ನೇ ಸಾಲಿನಲ್ಲಿ ರಾಜ್ಯದಲ್ಲಿ ವಿದ್ಯುತ್ ಪ್ರಸರಣಾ ಮತ್ತು ವಿತರಣೆಯಲ್ಲಿನ ನಷ್ಟ ಶೇಕಡ 18.9.

ಆ) 1989-90ನೇ ಸಾಲಿಗೆ ಮಾಹಿತಿ ಲಭ್ಯವಿದ್ದು ವಿವರಗಳು ಕೆಳಕಂಡಂತಿದೆ.

ರಾಜ್ಯದ ಹೆಸರು	ಶೇ. ನಷ್ಟ
ಆಂಧ್ರ ಪ್ರದೇಶ	20.2
ಕೇರಳ	22.5
ತಮಿಳುನಾಡು	18.5
ಬಿಹಾರ	21.5
ಒರಿಸ್ಸಾ	23.9

ಪಶ್ಚಿಮ ಬಂಗಾಳ	22.7
ಸಿಕ್ಕಿಂ	23.3
ಅಸ್ಸಾಮ್	21.6
ಮಣಿಪುರ	20.8
ಮೇಘಾಲಯ	10.9
ನಾಗಾಲ್ಯಾಂಡ್	20.9
ತ್ರಿಪುರ	30.0
ಅರುಣಾಚಲ ಪ್ರದೇಶ	27.5
ಮಿಜೋರಾಂ	29.0
ಗುಜರಾತ್	22.0
ಮಧ್ಯಪ್ರದೇಶ	19.5
ಮಹಾರಾಷ್ಟ್ರ	17.6
ಗೋವಾ	25.2
ಹರಿಯಾಣ	29.2
ಹಿಮಾಚಲ ಪ್ರದೇಶ	18.7
ಜಮ್ಮು ಮತ್ತು ಕಾಶ್ಮೀರ್	49.5
ಪಂಜಾಬ್	18.1
ರಾಜಾಸ್ಥಾನ	24.4
ಉತ್ತರ ಪ್ರದೇಶ	26.1

ಇ) ವಿದ್ಯುತ್ ಪ್ರಸರಣಾ ಮತ್ತು ವಿತರಣೆಯಲ್ಲಿನ ನಷ್ಟವನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಿಲ್ಲ. ಆದರೆ ಪ್ರತಿ ವರ್ಷ ಶೇ. 0.5ರಷ್ಟು ಕಡಿಮೆ ಮಾಡಲು ಉದ್ದೇಶಿಸಿದ್ದು, ಇದನ್ನು ಸಾಧಿಸಲು ಮುಖ್ಯವಾಗಿ ಕೆಳಕಂಡ ಕ್ರಮಗಳನ್ನು ಪ್ರತಿ ವರ್ಷವೂ ಕೈಗೊಳ್ಳಲಾಗುತ್ತಿದೆ.

1. ಹೊಸ ವಿದ್ಯುತ್ ಪ್ರಸರಣಾ ಮಾರ್ಗಗಳು ಮತ್ತು ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಾಣ ಮಾಡುವುದು.
2. ಹಾಲಿ ಇರುವ ವಿದ್ಯುತ್ ಉಪ ಕೇಂದ್ರಗಳಲ್ಲಿ ಅಗತ್ಯವಿರುವ ಕಡೆಗಳಲ್ಲಿ ಕೆಪಾಸಿಟರ್ ಬ್ಯಾಂಕುಗಳ ಸ್ಥಾಪನೆ.
3. 11 ಕೆವಿ ಫೀಡರುಗಳಲ್ಲಿ ಕೆಪಾಸಿಟರ್ ಬ್ಯಾಂಕುಗಳನ್ನು ಅಳವಡಿಸುವುದು.
4. 11 ಕೆವಿ ಎಕ್ಸ್‌ಪ್ರೆಸ್ ಫೀಡರುಗಳ ನಿರ್ಮಾಣ.
5. ವಿತರಣಾ ವ್ಯವಸ್ಥೆಯಲ್ಲಿ ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳನ್ನು ಸ್ಥಾಪಿಸುವುದು.

ವಿಷಯ : ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ದರ ಏರಿಕೆ

Q : 1784

ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೈತರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಮಂಡಳಿಯಿಂದ ಸರಬರಾಜು ಮಾಡುತ್ತಿರುವ